- ಪ್ರತಿವರ್ಷ ಜೂನ್ 12 ರಂದು "ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ" ಎಂದು ಆಚರಿಸಲಾಗುತ್ತಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನಿಗಮದ ಗಂಗಾ ಕಲ್ಯಾಣ ಯೋಜನೆಯ ಮಂಜೂರಾದ ಕೊಳವೆ ಬಾವಿಗಳ ಕುರಿತು

568 (892) ಶ್ರೀ ರಮಾನಾಥ್ ರೈ. ಬಿ. (ಬಂಟ್ವಾಳ):– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರಾಗಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು;

ಆ) ಆ ಪೈಕಿ ಅನುಷ್ಠಾನಗೊಂಡಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು;

ಇ) ತಾಲ್ಲೂಕುವಾರು ವಿವರ ತಿಳಿಸುವುದು;

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು):–

ಅ) ಪರಿಶಿಷ್ಟ ಜಾತಿ–93, ಪರಿಶಿಷ್ಟ ಪಂಗಡ–52

ಆ) ಪರಿಶಿಷ್ಟ ಜಾತಿ–06, ಪರಿಶಿಷ್ಟ ಪಂಗಡ–12

ಇ) ಅನುಬಂಧ ಲಗತ್ತಿಸಿದೆ

ಈ) ಕೊಳವೆಬಾವಿಗಳನ್ನು ಕೊರೆಯುವ ಟೆಂಡರ್ ಕರೆದಿದ್ದರೂ ಯಾವ ಗುತ್ತಿಗೆದಾರರೂ ಭಾಗವಹಿಸಲಿಲ್ಲ. ಟೆಂಡರ್ ಮತ್ತೆ ಮತ್ತೆ ಕರೆಯಲು ಕ್ರಮ ವಹಿಸಲಾಗುತ್ತಿದೆ.

ಅನುಬಂಧ

ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

ಬಂಟ್ವಾಳ–02, ಸುಳ್ಯ–04 = ಒಟ್ಟು 06

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

ಕ್ರ. ಸಂ.	ವಿಧಾನ ಸಭಾ ಕ್ಷೇತ್ರ ಹೆಸರು	ಗುರಿ	ಸಾಧನೆ		ಬಾಕಿ
			ಕೊ.ಬಾ.	ತೆ.ಬಾ	
1	ಮಂಗಳೂರು	1	0	0	1
2	ಮಂಗಳೂರು ಉತ್ತರ	3	0	0	3
3	ಮಂಗಳೂರು ದಕ್ಷಿಣ	1	0	0	1
4	ಮೂಡಬಿದ್ರೆ	4	0	0	4
5	ಬೆಳ್ತಂಗಡಿ	10	0	4	6
6	ಬಂಟ್ವಾಳ	8	0	0	8
7	ಪುತ್ತೂರು	14	0	6	8
8	ಸುಳ್ಯ	11	0	2	9
	ಒಟ್ಟು	**52**	**0**	**12**	**40**